ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	**142 (1061)**
ಸದಸ್ಯರ ಹೆಸರು	**ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ)**
ಉತ್ತರಿಸಬೇಕಾದ ದಿನಾಂಕ	**16-03-2020**
ಉತ್ತರಿಸಬೇಕಾದ ಸಚಿವರು	**ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ)**

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರ ಸಂಖ್ಯೆ ಎಷ್ಟು;</td><td>ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರ ಸಂಖ್ಯೆ: 14564</td></tr>
<tr><td>ಆ)</td><td>ಈ ಅತಿಥಿ ಉಪನ್ಯಾಸಕರಲ್ಲಿ U.G.C. ಅರ್ಹತೆಯಾದ Net, Kset, Phd, Mphil ಪದವಿಗಳನ್ನು ಪೂರೈಸಿರುವ ಉಪನ್ಯಾಸಕರುಗಳು ಎಷ್ಟು; ಪೂರೈಸದೆ ಇರುವ ಉಪನ್ಯಾಸಕರೆಷ್ಟು;</td><td>ಈ ಅತಿಥಿ ಉಪನ್ಯಾಸಕರಲ್ಲಿ ಯು.ಜಿ.ಸಿ. ಅರ್ಹತೆಯಾದ ಎನ್.ಇ.ಟಿ., ಕೆ-ಸೆಟ್., ಪಿಹೆಚ್.ಡಿ., ಪದವಿಗಳನ್ನು ಪೂರೈಸಿರುವ ಹಾಗೂ ಪೂರೈಸದೇ ಇರುವ ಅತಿಥಿ ಉಪನ್ಯಾಸಕರ ವಿವರ ಈ ಕೆಳಕಂಡಂತಿದೆ:
<table>
<tr><th colspan="2">ಯು.ಜಿ.ಸಿ. ಅರ್ಹತೆಯನ್ನು ಪೂರೈಸಿರುವ ಉಪನ್ಯಾಸಕರ ಸಂಖ್ಯೆ</th><th rowspan="2">ಯು.ಜಿ.ಸಿ. ಅರ್ಹತೆಯನ್ನು ಪೂರೈಸದೆ ಇರುವ ಉಪನ್ಯಾಸಕರ ಸಂಖ್ಯೆ</th></tr>
<tr><th>ಎನ್ಇಟಿ/ ಕೆ-ಸೆಟ್</th><th>ಪಿಹೆಚ್ಡಿ</th></tr>
<tr><td>4031</td><td>1220</td><td>9313</td></tr>
</table></td></tr>
<tr><td>ಇ)</td><td>ಈ ಅತಿಥಿ ಉಪನ್ಯಾಸಕರುಗಳಿಗೆ ಹಲವು ತಿಂಗಳುಗಳಿಂದ ವೇತನ ಪಾವತಿ ಆಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಬಂದಿದೆ.</td></tr>
<tr><td>ಈ)</td><td>ಬಂದಿದ್ದಲ್ಲಿ, ಯಾವಾಗ ವೇತನ ಪಾವತಿಸಲಾಗುವುದು;</td><td>2019-20ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 2202-03-103-2-01-051 ರಡಿಯಲ್ಲಿ ಅತಿಥಿ ಉಪನ್ಯಾಸಕರ ಗೌರವಧನ ಪಾವತಿಗಾಗಿ ರೂ.11214.00 ಲಕ್ಷಗಳ ಅನುದಾನ ಒದಗಿಸಿದ್ದು, ಈ ಅನುದಾನದಲ್ಲಿ ಇಲಾಖಾ ವ್ಯಾಪ್ತಿಯಡಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳಿಗೆ ನವೆಂಬರ್ 2019 ರ ಮಾಹೆವರೆಗೆ ಗೌರವಧನ ಪಾವತಿಗೆ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. ಡಿಸೆಂಬರ್ 2019 ರಿಂದ ಫೆಬ್ರುವರಿ 2020 ರ ಮಾಹೆವರೆಗೆ ಹೆಚ್ಚುವರಿ ಅವಶ್ಯವಿರುವ ರೂ.4868.06 ಲಕ್ಷಗಳ ಅನುದಾನವನ್ನು ಮಂಜೂರು ಮಾಡುವಂತೆ ಆರ್ಥಿಕ ಇಲಾಖೆಯನ್ನು ಕೋರಿದ್ದು, ಆರ್ಥಿಕ</td></tr>
</table>

		ಇಲಾಖೆಯು ಹೆಚ್ಚುವರಿ ಅನುದಾನವನ್ನು ಒದಗಿಸಲು ಅವಕಾಶವಿರುವುದಿಲ್ಲವೆಂದು ತಿಳಿಸಿರುತ್ತದೆ. ಆದಾಗ್ಯೂ ಆಯವ್ಯಯ ಕ್ರೋಢೀಕರಿಸಿ / ಹೊಂದಾಣಿಕೆ ಮಾಡಿ ಒದಗಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.
ಉ)	ಇವರ ಸೇವಾ ಭದ್ರತೆಗೆ ಹಾಗೂ ಖಾಯಂಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;	ಕಾಲೇಜು ಶಿಕ್ಷಣ ಇಲಾಖೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪ್ರತಿ ಶೈಕ್ಷಣಿಕ ವರ್ಷದಲ್ಲಿ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ಉಂಟಾಗುವ ಕಾರ್ಯಭಾರವನ್ನು ಮೊದಲು ಖಾಯಂ ಅಧ್ಯಾಪಕರಿಗೆ ಹಂಚಿಕೆ ಮಾಡಿ, ನಂತರ ಉಳಿಕೆಯಾಗುವ ಹೆಚ್ಚುವರಿ ಕಾರ್ಯಭಾರವನ್ನು ನಿರ್ವಹಿಸಲು ಮಾತ್ರ ತಾತ್ಕಾಲಿಕವಾಗಿ ಅತಿಥಿ ಉಪನ್ಯಾಸಕರುಗಳ ಸೇವೆಯನ್ನು ಬಳಸಿಕೊಳ್ಳಲಾಗುತ್ತಿದೆ. ಮುಂದುವರೆದು, ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡಲು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ಹಾಗೆಯೇ ಅತಿಥಿ ಉಪನ್ಯಾಸಕರ ನೇಮಕಾತಿಯನ್ನು ಸಕ್ರಮಾತಿಗೊಳಿಸಲು ಯಾವುದೇ ನಿಯಮಗಳನ್ನು ಹೊರಡಿಸಿರುವುದಿಲ್ಲ. ಆದುದರಿಂದ, ಅತಿಥಿ ಉಪನ್ಯಾಸಕರುಗಳ ತಾತ್ಕಾಲಿಕ ಸೇವೆಯನ್ನು ಪರಿಗಣಿಸಿ ಖಾಯಂ ಮಾಡಲು ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅವಕಾಶ ಇರುವುದಿಲ್ಲ. ಶೈಕ್ಷಣಿಕ ವರ್ಷ ಪ್ರಾರಂಭದಲ್ಲಿ ಹೆಚ್ಚುವರಿ ಕಾರ್ಯಭಾರವನ್ನು ಪರಿಗಣಿಸಿ, ಅತಿಥಿ ಉಪನ್ಯಾಸಕರುಗಳ ಆಯ್ಕೆ ಪ್ರಕ್ರಿಯೆ ಕೈಗೊಳ್ಳಲಾಗುತ್ತಿದ್ದು, ಪ್ರಸ್ತುತ 2018-19ನೇ ಸಾಲಿನಲ್ಲಿ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದವರನ್ನು 2019-20ನೇ ಸಾಲಿನಲ್ಲಿಯೂ ಮುಂದುವರೆಸಲಾಗಿದೆ. ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದ ಶ್ರೀ ವೀರಣ್ಣ ಎಸ್. ಸಜ್ಜನರ್ ಹಾಗೂ ಇತರೆ 15 ಅತಿಥಿ ಉಪನ್ಯಾಸಕರುಗಳು ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಅರ್ಜಿ ಸಂಖ್ಯೆ:4625-4640/2012ನ್ನು ದಾಖಲಿಸಿ, ತಮ್ಮ ಸೇವೆಯನ್ನು ಸಕ್ರಮಾತಿಗೊಳಿಸುವಂತೆ ಹಾಗೂ ಸರ್ಕಾರಿ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಯಲ್ಲಿ ತಮ್ಮನ್ನು ನೇಮಕ ಮಾಡುವಂತೆ ಸರ್ಕಾರ ಹಾಗೂ ಇಲಾಖೆಗೆ ನಿರ್ದೇಶನ ಕೋರಿದ್ದರು. ಸದರಿ ಅರ್ಜಿಯನ್ನು ಪರಿಶೀಲಿಸಿದ ಮಾನ್ಯ ನ್ಯಾಯಮಂಡಳಿಯು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಂವಿಧಾನ ಪೀಠವು ಉಮಾದೇವಿ ಪ್ರಕರಣದಲ್ಲಿ ತಾತ್ಕಾಲಿಕ ನೌಕರರನ್ನು ಅವರ ನೇಮಕಾತಿ ಅವಧಿಗಿಂತ ಹೆಚ್ಚುವರಿಯಾಗಿ ಮುಂದುವರೆದಿದ್ದರೂ ಸಹ ಸೇವಾ ಸಕ್ರಮಾತಿಗೆ ಅರ್ಹರಾಗಿರುವುದಿಲ್ಲವೆಂದು ಹಾಗೂ ಇಂತಹ ನಿಯಮಬಾಹಿರ ನೇಮಕಾತಿಯನ್ನು ಸಕ್ರಮಾತಿ ಗೊಳಿಸಬಾರದೆಂದು ತಿಳಿಸಿರುವ ನಿಲುವನ್ನು ಆಧರಿಸಿ ಸದರಿ ಅರ್ಜಿಯನ್ನು ದಿನಾಂಕ:28-03-2013 ರಂದು ವಜಾಗೊಳಿಸಿದೆ. ಮುಂದುವರೆದು, ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಂವಿಧಾನ ಪೀಠವು ಉಮಾದೇವಿ ಪ್ರಕರಣದಲ್ಲಿ

		ನಿಯಮಬಾಹಿರ ನೇಮಕಾತಿಗಳನ್ನು ಸಕ್ರಮಾತಿಗೊಳಿಸಬಾರದೆಂಬ ನಿಲುವನ್ನು ಇತ್ತೀಚೆಗೆ State of Jammu & Kashmir & Other Vs District Bar Association, Bandipora ಪ್ರಕರಣದಲ್ಲಿ ಸಹ ಪುನರುಚ್ಚರಿಸಿರುತ್ತದೆ. ಕರ್ನಾಟಕ ಆಡಳಿತ ನ್ಯಾಯಮಂಡಳಿಯು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಂವಿಧಾನ ಪೀಠವು ಉಮಾದೇವಿ ಪ್ರಕರಣದಲ್ಲಿ ನೀಡಿರುವ ತೀರ್ಪನ್ನು ಆಧರಿಸಿ, ಸೇವಾ ಸಕ್ರಮಾತಿ ಕೋರಿ ಅತಿಥಿ ಉಪನ್ಯಾಸಕರುಗಳು ಸಲ್ಲಿಸಿದ ಅರ್ಜಿಗಳನ್ನು ವಜಾಗೊಳಿಸಿರುವ ಹಿನ್ನೆಲೆಯಲ್ಲಿ ಅತಿಥಿ ಉಪನ್ಯಾಸಕರ ನೇಮಕಾತಿಗಳನ್ನು ಸಕ್ರಮಾತಿಗೊಳಿಸಲು ಅವಕಾಶವಿರುವುದಿಲ್ಲ.

ಇಡಿ 68 ಡಿಸಿಇ 2020

(ಡಾ: ಅಶ್ವಥ್ ನಾರಾಯಣ ಸಿ.ಎನ್.)
ಉಪ ಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ)